Advanced International Journal for Research (AIJFR)
E-ISSN: 3048-7641 ● Website: www.aijfr.com ● Email: editor@aijfr.com

ಬಾನು ಮುಷ್ತಾಕರ 'ಸಫೀರಾ' ಕತೆಯಲ್ಲಿ ಸ್ತ್ರೀ ಪಾತ್ರಗಳು

ಡಾ.ಮುಮ್ತಾಜ್ ಬೇಗಂ. ಗಂಗಾವತಿ

ಸಹ ಪ್ರಾಧ್ಯಾಪಕರು ಮತ್ತು ಸಂಯೋಜಕರು, ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ
ಎಸ್.ಕೆ.ಎನ್.ಜಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಗಂಗಾವತಿ, ಜಿ:ಕೊಪ್ಪಳ

ಬಾನು ಮುಷ್ತಾಕ್ ಕನ್ನಡ ಸಾಹಿತ್ಯದ ಮಹತ್ವದ ಲೇಖಕಿ. ಪತ್ರಕರ್ತೆ, ವಕೀಲೆ, ಸಾಮಾಜಿಕ ಕಾರ್ಯಕರ್ತೆಯಾಗಿ ವಿವಿಧ ಕ್ಷೇತ್ರಗಳಲ್ಲಿ ತಮ್ಮ ತೊಡಗಿಸಿಕೊಂಡವರು. ಕತೆ, ಕಾದಂಬರಿ, ಪ್ರಬಂಧ, ಕವನ ಸಂಕಲನ ಹೀಗೆ ಹಲವು ಪ್ರಕಾರಗಳಲ್ಲಿ ಸಾಹಿತ್ಯ ಕೃಷಿ ಮಾಡಿದ್ದಾರೆ. ಇವರ ಕೃತಿಗಳು ಉರ್ದು, ಹಿಂದಿ ಮಲಯಾಳಂ, ತಮಿಳು, ಇಂಗ್ಲೀಷ ಭಾಷೆಗಳಿಗೆ ಅನುವಾದಗೊಂಡಿವೆ. ಸಣ್ಣ ಕಥಾ ಸಂಕಲನಕ್ಕಾಗಿ ಪ್ರತಿಷ್ಠಿತ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿಯನ್ನು ಗೆದ್ದ ಮೊದಲ ಕನ್ನಡದ ಲೇಖಕಿ ಎನ್ನುವುದು ಕನ್ನಡದ ಸಂದರ್ಭದಲ್ಲಿ ಹೆಮ್ಮೆಯ ಸಂಗತಿಯಾಗಿದೆ.

ಬಾನು ಮುಷ್ತಾಕ್ ಅವರು ಹೇಳುವಂತೆ "ಸೃಜನಶೀಲ ಅಭಿವ್ಯಕ್ತಿಯ ತುಡಿತಗಳನ್ನು ಹೃದಯಕ್ಕೆ ಸಮೀಪದ ಸಂವೇದನೆಗಳಾಗಿ ಸಮೀಕರಿಸಬಹುದು. ಹೃದಯ ಮತ್ತು ಬುದ್ಧಿಯ ಸಂಘರ್ಷದಲ್ಲಿ ಯಾವುದು ಪ್ರಧಾನವಾಗಿ ನಿರ್ಧರಿಸುವ ಶಕ್ತಿಯಾಗುತ್ತದೆ ಎಂಬುದರ ಮೇಲೆ ವ್ಯಕ್ತಿಯ ಬದುಕು ಮತ್ತು ಧೋರಣೆಗಳು ನಿರ್ದೇಶಿಸಲ್ಪಡುತ್ತದೆ. ನಮ್ಮ ಕುಟುಂಬ, ಪರಿಸರ, ನಂಬಿಕೆ, ಆಚಾರ-ವಿಚಾರ ಮತ್ತು ನಮ್ಮ ಸುರಕ್ಷಿತ ವಲಯ ಎಲ್ಲವೂ ನಮಗೆ ಅಪ್ಯಾಯಮಾನವಗಿರುತ್ತದೆ. ಆದರೆ ನಮ್ಮ ಸುತ್ತಮುತ್ತಲಿನ ಸಹ ಜೀವಿಗಳ ಬಾಳ್ವೆ ನಮ್ಮನ್ನು ಬಾಧಿಸದಿದ್ದಲ್ಲಿ, ತಟ್ಟಿದದಲ್ಲಿ ನಮ್ಮ ಅಂತರಂಗದ ಸೆಲೆ ಬತ್ತಿದಂತೆಯೇ ಸರಿ" ಎನ್ನುತ್ತಾರೆ. ಬಾನು ಮುಷ್ತಾಕ್ ಅವರು ಒಬ್ಬ ಸಂವೇದಾನಾಶೀಲ ವ್ಯಕ್ತಿ. ನ್ಯಾಯವಾದಿಯಾಗಿ ತಮ್ಮ ಸುತ್ತಮುತ್ತಲಿನ ಅನೇಕರ ಬದುಕನ್ನು ತುಂಬಾ ಹತ್ತಿರದಿಂದ ನೋಡಿದವರು. ಜನರ ನೋವುಗಳನ್ನು ನಲಿವುಗಳನ್ನು ಕಂಡವರು. ಹೀಗೆ ಕಂಡುಂಡ ಅನುಭವನ್ನು ಅಕ್ಷರಗಳ ಮೂಲಕ ಅಭಿವ್ಯಕ್ತಿದ ರೂಪಗಳೇ ಈ ಕತೆಗಳು ಎಂದರೆ ಅತಿಯೋಶಕ್ತಿಯಾಗಲಾರದು.

ಬಾನು ಅವರ ಕಥೆಗಳನ್ನು ಪ್ರವೇಶಿಸಿದರೆ ಮುಸ್ಲಿಮ್ ಸಮುದಾಯದ ಪಿತೃಸತ್ತೆ ಧೋರಣೆಯ ಪ್ರತಿರೋಧದ ನೆಲೆಗಳನ್ನು ಕಾಣುತ್ತೇವೆ. ಇವರ ಕತೆಗಳಲ್ಲಿ ಬರುವ ಸ್ತ್ರೀ ಪಾತ್ರಗಳು ನೋವನ್ನೇ ಬದುಕಾಗಿಸಿಕೊಂಡಂತೆ, ಮಾತನ್ನು ಕಳೆದುಕೊಂಡಂತೆ ಅನ್ನಿಸಿದರು, ಕಥಾನಾಯಕಿಯರು ಹೆಣ್ಣಿನೊಳಗೆ ಅಡಗಿದ ಪ್ರತಿರೋಧದ ಕೆಂಡದ ಕಾವನ್ನು ಸಹೃದಯರಿಗೆ ದಾಟಿಸುತ್ತಾರೆ. ಧರ್ಮದೊಳಗಿನ ಅವೈಜ್ಞಾನಿಕ ನಿಲುವುಗಳನ್ನು ಗಟ್ಟಿಯಾಗಿ ವಿರೋಧಿಸುತ್ತಾರೆ. ಸಾಂಪ್ರದಾಯಿಕತೆ ಮತ್ತು ಪ್ರಗತಿಶೀಲ ಧೋರಣೆಗಳೆರಡನ್ನು ಕತೆಯಲ್ಲಿ ತರುವ ಮೂಲಕ ಮನುಷ್ಯನೊಳಗಿನ ಇರ್ಷೆ, ಧರ್ಮದೊಳಗಿನ ಬಂಧನದ ಮುಕ್ತತೆ ಮತ್ತು ಸ್ವಾತಂತ್ರ್ಯದ ಶೋಧನೆ ಇರುತ್ತದೆ.

ಬಾನು ಮುಷ್ತಾಕ್ ಅವರ ಕಥಾ ಸಾಹಿತ್ಯವನ್ನು ವಿವಿಧ ಆಯಾಮಗಳಲ್ಲಿ ಅಧ್ಯಯನ ಮಾಡಲು ಸಾಧ್ಯತೆಗಳಿವೆ. ಇವರ ಸಾಹಿತ್ಯದಲ್ಲಿ ಮನುಷ್ಯತ್ವದ ಹುಡುಕಾಟವಿದೆ. ಅದರಲ್ಲೂ ಹೆಣ್ಣಿನ ಕಣ್ಣೋಟದಲ್ಲಿ ಸಮಾಜವನ್ನು ನೋಡುವ ಅಭಿವ್ಯಕ್ತಿಗಳಿವೆ, ಪಾತ್ರಗಳಿವೆ. ಕಥೆಗಳನ್ನು ಅವಲೋಕಿಸಿದಾಗ ಲೋಕದ್ರಹಿಕೆಯಲ್ಲಿ ಹೆಣ್ಣನ್ನು ನೋಡುವ ದೃಷ್ಟಿಕೋನಗಳನ್ನು ತಮ್ಮ ಕಥೆಗಳ ಪಾತ್ರಗಳ ಮೂಲಕ ನೈಜತೆಯ ನೆಲೆಯಲ್ಲಿ ಕಥಾ ಹಂದರವನ್ನು ಹೆಣೆಯುವ ಕಲಾತ್ಮಕತೆ ಇದೆ.

ಮಹಿಳಾ ಸಾಹಿತ್ಯ ಅಧ್ಯಯನದ ಸಂದರ್ಭದಲ್ಲಿ ಬಾನು ಮುಷ್ತಾಕ್‌ರ ಕತೆಗಳು ಮಹತ್ವದ ಪಾತ್ರವಹಿಸುತ್ತವೆ. ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀಯನ್ನು ಕಂಡ ರೀತಿಯನ್ನು ಸಾಹಿತ್ಯ ಕೃತಿಗಳ ಮೂಲಕ ಅಧ್ಯಯನ ಮಾಡುವುದು ಇಂದಿನ ಅಗತ್ಯವೂ ಹೌದು. ಸ್ತ್ರೀಯನ್ನು ಕಾಣುವ ಬಗೆಗಳು ಬೇರೆ ಬೇರೆ ಸಮುದಾಯಗಳಲ್ಲಿ ಭಿನ್ನ ಬಗೆಗಳಿದ್ದರೂ ಸ್ತ್ರೀಯನ್ನು ಎರಡನೆಯ ದರ್ಜೆ ಪ್ರಜೆಯಂತೆ, ಅಧೀನ ಸಂಸ್ಕೃತಿಯ ವಾರಸುದಾರಿಕೆಯಂತೆ ಕಾಣಲಾಗುತ್ತದೆ. ಹೆಣ್ಣಿನ ನೋವಿನ ಕಥನಗಳು ಬೇರೆ ಬೇರೆ ಸ್ತರಗಳಲ್ಲಿರುವ ಮಹಿಳಾ ಸಂವೇದನೆಯು, ಸ್ವರೂಪದ ದೃಷ್ಟಿಯಿಂದ ಭಿನ್ನವಾಗಿದ್ದರೂ ಅಧೀನತೆಗೆ ಒಳಗಾಗುವುದು ಹೆಣ್ಣೇ ಎನ್ನುವುದು ಗಮನಿಸಬೇಕಾದ ಸಂಗತಿಯಾಗಿದೆ. ವರ್ಣ, ವರ್ಗ, ಲಿಂಗ, ಜಾತಿ ವ್ಯವಸ್ಥೆಯಲ್ಲೂ ಸ್ತ್ರೀಯನ್ನು ಅತ್ಯಂತ ಹೀನಾಯವಾಗಿ ಕಂಡ ಸಂಗತಿಗಳು ಇಲ್ಲದಿಲ್ಲ. ಹೆಣ್ಣು ಪ್ರಗತಿಪರವಾಗಿ ಆಲೋಚಿಸಲು ಪ್ರಾರಂಭಿಸುತ್ತಾಳೋ ಆಗಿನಿಂದಲೇ ಸಮಾಜದ ವಿರೋಧವನ್ನು ಎದುರಿಸುವ ಎದೆಗಾರಿಕೆಯನ್ನು ಬೆಳೆಸಿಕೊಳ್ಳ' ಬೇಕಾಗುತ್ತದೆ. ಸಂಪ್ರದಾಯದ ವಿರುದ್ಧದ ನಡೆ, ಮಾತು ಹೆಣ್ಣಿಗೆ ನಿಷಿದ್ಧವಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ಸಂಪ್ರದಾಯದ ವಿರುದ್ಧ ಬದುಕು ಕಟ್ಟಿಕೊಳ್ಳುವುದು ಸಾಹಸದ ಕೆಲಸವೇ ಆಗಿರುತ್ತದೆ. ಬಾನು ಅವರ ಕತೆಗಳಲ್ಲಿ ಸ್ತ್ರೀ

ಪಾತ್ರಗಳು ಜೀವಂತ ಪಾತ್ರಗಳಂತೆ ಮಾತನಾಡುತ್ತವೆ. ಸಮಾಜದ ನೈಜ ಘಟನೆಗಳೆನ್ನುವಂತೆ ಭಾಸವಾಗುತ್ತವೆ; ಪ್ರತಿಯೊಬ್ಬರ ಮನೆಯ ಕತೆಗಳಂತೆ ಕಾಣುತ್ತವೆ.

ಇವರ ಕಥಾ ನಿರೂಪಣಾ ಕ್ರಮ ಸರಳವಾಗಿ ಪಾತ್ರ ಚಿತ್ರಣವನ್ನು ಕೊಟ್ಟರೂ ಉದಾತ್ತ ಸಂದೇಶವನ್ನು ಕೊಡುವಲ್ಲಿ ಯಶ ಕಾಣುತ್ತವೆ. ಕತೆಗಾರ್ತಿಯ ಸಂವೇದನಾಶಕ್ತಿಗೆ ಸಾಕ್ಷಿಕರಿಸುತ್ತವೆ. ಬಾನು ಮುಷ್ತಾಕ್‌ರ ಮಹತ್ವದ ಕಥಾ ಸಂಕಲನಗಳಲ್ಲಿ ಒಂದಾದ ಸಫೀರಾ ಕತೆಯಲ್ಲಿ ಬರುವ ಸ್ತ್ರೀ ಪಾತ್ರ ಚಿತ್ರಣಗಳು ನೈಜ ಸಮಾಜದ ಪ್ರತಿಬಿಂಬದಂತೆ ಕಾಣುತ್ತವೆ. ಸಫೀರಾ ಕತೆಯಲ್ಲಿ ಸಫೀರಾ, ಶಾಹೀನ್ ಪಾತ್ರಗಳು ಮುಖ್ಯ ಭೂಮಿಕೆಯನ್ನು ನಿರ್ವಹಿಸಿವೆ. ಈ ಕತೆಯಲ್ಲಿ ಮುಸ್ಲಿಮ್ ಸಮುದಾಯದ ಸ್ತ್ರೀ ಚಿತ್ರಣವನ್ನು ಕತೆಗಾರ್ತಿ ಸಶಕ್ತವಾಗಿ ಕಟ್ಟಿಕೊಟ್ಟಿದ್ದಾರೆ.

ಸಫೀರಾ ಕತೆಯಲ್ಲಿ ಬರುವ ಸ್ತ್ರೀ ಪಾತ್ರಗಳ ಕುರಿತು ಮುಖ್ಯವಾಗಿ ಇಲ್ಲಿ ಚರ್ಚಿಸುವುದಾದರೆ ಕತೆ ಆರಂಭವಾಗುವುದು ಸಾದಿಕ್ ಮತ್ತು ಶಾಹೀನ್ ಕುಟುಂಬದಲ್ಲಿ ನಡೆಯುತ್ತಿದ್ದ ಸಾಮಾನ್ಯ ಅಂಶಗಳನ್ನು ಕತೆಯ ಪ್ರಾರಂಭದಲ್ಲಿ ತರುವುದರ ಜೊತೆಗೆ ಸಾದಿಕ್ ಪಾತ್ರ ಪರಿಚಯಿಸಲಾಗುತ್ತದೆ. ಶಾಹೀನ್ ಒಬ್ಬ ಗೃಹಿಣಿಯಾಗಿ, ಗೃಹಕೃತ್ಯಗಳನ್ನು ನಿರತಳಾದ ಹೆಣ್ಣಿನ ತಳಮಳಗಳು, ಕೌಟುಂಬಿಕ ಆತಂಕಗಳು, ಮನೆಯ ತಾಪತ್ರಯಗಳು ಶಾಹೀನ್ ತನ್ನ ಮಾತಿನ ಮೂಲಕ ಅಭಿವ್ಯಕ್ತಿಸುತ್ತಾಳೆ. ಮಗುವಿನ ಅನಾರೋಗ್ಯದಲ್ಲಿ ಬಳಲುತ್ತಿದ್ದರು ಗಂಡ ಸರಿಯಾದ ಸಮಯಕ್ಕೆ ಮನೆಗೆ ಮರಳದೇ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಂಡಿರುವುದು ಹೀಗೆ ಕುಟುಂಬ ಮತ್ತು ಸಾಮಾಜಿಕ ಜವಾಬ್ದಾರಿಗಳನ್ನು ಮಧ್ಯೆ ಸಾದಿಕ್ ಕುಟುಂಬಕ್ಕೆ ಸಮಯ ಕೊಡುವುದು ಕಡಿಮೆ ಆಗುವುದು ಅದರಿಂದ ಮನೆಯೊಳಗಿರುವ ಶಾಹೀನ್ ಮತ್ತು ಸಾಧಿಕ್ ಇಬ್ಬರು ಸಹಜವಾಗಿ ಮಾತಿನ ಸಂಘರ್ಷಕ್ಕಿಳಿಯುವ ಸನ್ನಿವೇಶಗಳೆಲ್ಲ ಎಲ್ಲರ ಮನೆಯ ವಿಷಯದಂತೆ ಕಾಣುತ್ತದೆ. ಶಾಹೀನ್ ಗೃಹಿಣಿಯಾಗಿದ್ದು ಆಕೆಗೆ ಹೊರಗಿನ ಪ್ರಪಂಚದ ಅರಿವಿಲ್ಲದಿದ್ದರೂ ನೆರೆಹೊರೆಯವರ ವಿಷಯಗಳು ಆಕೆಯವರೆಗೆ ತಲುಪುತ್ತಿದ್ದವು. ಸಾದಿಕ್ ಹೆಂಡತಿಯನ್ನು ಒಲಿಸಿಕೊಳ್ಳುವ ಕಲೆಗಾರಿಕೆಯನ್ನು ಹೊಂದಿದವನು. ಸಮಾಜದ ಆಗುಹೋಗುಗಳನ್ನು ಹತ್ತಿರದಿಂದ ಕಂಡ ಸಾದಿಕ್ ತನ್ನ ಹೆಂಡತಿಯ ಮುನಿಸನ್ನು ಅರ್ಥಮಾಡಿಕೊಳ್ಳುವ ಗಂಡನಂತೆ ಕಾಣುತ್ತಾನೆ. ಹೊಂದಾಣಿಕೆಯ ಬದುಕನ್ನು ಬದುಕಿದಾಗಲೇ ಸಂಸಾರದ ನೊಗ ಸಾಗಲು ಸಾಧ್ಯವಾಗುತ್ತದೆ. ಶಾಹೀನ ಒಮ್ಮೊಮ್ಮೆ ಸ್ಥಾಪಿತ ಮೌಲ್ಯದ ಭಾಗದಂತೆ ಕಾಣುತ್ತಾಳೆ.

ಸಾದಿಕ್ ಶಾಹೀನಳಿಗೆ ಸಫೀರಾ ಮತ್ತು ಅಸ್ಲಮ್‌ರ ಬಗ್ಗೆ ಹೇಳಲು ಮಾತಿಗೆ ಮುಂದಾದಾಗ "ಶಾಹೀನ್ ಈ ಸಫೀರ ಇದ್ದಾಳಲ್ಲ ಎಂಥ ಹುಡುಗಿ? ಎಂದು ಹೇಳುತ್ತಿರುವಂತೆ ಶಾಹೀನ್ ಹೇಳುತ್ತಾಳೆ "ಎಂಥ ಹುಡುಗಿ, ತೆಳ್ಳಗೆ ಬೆಳ್ಳಗೆ ಹಲ್ಲಿ ಇದ್ದಾಂಗ ಇದಾಳೆ. ಸೊಂಟದ ಕೆಳಗೆ ಸೀರೆ ಉಟ್ಕೊಂಡು, ಒಂದ್ ನೆರಿಗೇನೂ ಅಲ್ಲಾಡದ ಹಾಗೆ ಠುಮಕ್ ಠುಮಕ್ ಅಂತ ನಡೀತಾಳೆ. ಹಿರೀರು ಯಾರಾದೂ ಎದುರು ಬಂದರೂ ತಲೆ ಮೇಲೆ ಸೆರಗು ಅಂತ ಹಾಕಲ್ಲ, ಪಾಪದವ ಆ ಅಸ್ಲಮ್ ಒಬ್ಬ ಸಿಕ್ಕಿದ್ದಾನೆ, ಅವನ್ನ ಹುರಿದು ಮುಕ್‌ತಿದಾಳೆ" ಎನ್ನುವಲ್ಲಿ ಶಾಹೀನ್‌ನಳ ಸಾಂಪ್ರದಾಯಕ ಆಲೋಚನಾ ಕ್ರಮವನ್ನು ಕತೆಯ ಹಂದರದೊಳಗೆ ತರುತ್ತಲೇ ಕತೆಗಾರ್ತಿಗೆ ಇನ್ನೇನನ್ನೋ ಹೇಳಬೇಕಾಗಿದೆ. ಹೆಣ್ಣನ್ನು ಹೆಣ್ಣಿಗೆ ಮುಖಾಮುಖಿಗೊಳಿಸುವ ಮೂಲಕವೇ ಹೊಸ ಚಿಂತನಾ ಕ್ರಮವನ್ನು ಸಫೀರಾ ಪಾತ್ರದ ಮೂಲಕ ಕಥೆಯ ಹಂದರವನ್ನು ಹೆಣೆಯಲಾಗಿದೆ.

ಸಫೀರಾ ಕತೆಯಲ್ಲಿ ಮುಖ್ಯ ಭೂಮಿಕೆಯಲ್ಲಿ ಬರುವ ಪಾತ್ರವೇ ಸಫೀರಾ ಮತ್ತು ಅಸ್ಲಮ್. ಸಫೀರಾ ಕತೆಯ ಹೆಸರು ಸೂಚಿಸುವಂತೆ ಸ್ತ್ರೀ ನೋಟದಲ್ಲಿ ಸಮಾಜವನ್ನು ಅರಿಯುವ ಬಗೆಯು ಹೌದು. ಅದರಲ್ಲೂ ಮುಸ್ಲಿಮ್ ಸಮುದಾಯದ ಹೆಣ್ಣುಮಕ್ಕಳ ಕೌಟುಂಬಿಕ ಬದುಕು, ಸಾಮಾಜಿಕ ವ್ಯವಸ್ಥೆಯೊಂದಿಗೆ ಅವರ ಒಡನಾಟ, ಹೆಣ್ಣಿನ ಚಲನಶೀಲತೆಯನ್ನು ಭಿನ್ನ ದೃಷ್ಟಿಕೋನದಲ್ಲಿ ನೋಡುವ ಸಾಮಾಜೋ ಧಾರ್ಮಿಕ ವ್ಯವಸ್ಥೆಯಲ್ಲಿ ಹೆಣ್ಣು ತನ್ನ ಅಸ್ಮಿತೆಯನ್ನು ಗುರುತನ್ನು ನೆಲೆಗೊಳಿಸಿಕೊಳ್ಳುವಲ್ಲಿ ನಡೆಸುವ ಹೋರಾಟದ ಸಂಕಥನದಂತೆ ಇಲ್ಲಿನ ಸಫೀರಾ ಪಾತ್ರ ಕಂಡು ಬರುತ್ತದೆ. ಪ್ರೀತಿಸಿ ಬದುಕನ್ನು ಆಯ್ದುಕೊಂಡಾಗ ಸಹಜವೆನ್ನುವಂತೆ ಸಫೀರಾ ತವರುಮನೆಯವರು ವಿರೋಧಿಸುತ್ತಾರೆ. ಹೊಸ ಬದುಕಿನ ಕನಸನ್ನು ಹೊತ್ತ ದಂಪತಿಗಳ ಬದುಕು ಬಹು ಬೇಗ ಸಂಸಾರದ ತಾಪತ್ರಯಗಳಲ್ಲಿ ತೊಳಲುವಂತಾಗುತ್ತದೆ. ಅಸ್ಲಮ್ ಸಫೀರಾ ದಂಪತಿಗಳಿಗೆ ಸಂಸಾರಿಕ ಜವಾಬ್ದಾರಿಗಳ ತೊಳಲಾಟ, ಸಮಸ್ಯೆ ಮತ್ತು ಸವಾಲುಗಳು ಎದುರಾದಾಗ ಎದುರಿಸುವ ಬಗೆಯಲ್ಲಿ ಉಂಟಾದ ಸಂಘರ್ಷಗಳನ್ನು ಕತೆಗಾರ್ತಿ ತುಂಬಾ ಮಾರ್ಮಿಕವಾಗಿ ಕಟ್ಟಿಕೊಟ್ಟಿದ್ದಾರೆ.

ಅಸ್ಲಮ್ ಮತ್ತು ಸಫೀರಾಳ ಇಬ್ಬರ ಮಧ್ಯ ಉಂಟಾದ ಜಗಳವನ್ನು ಮಧ್ಯಸ್ಥಿಕೆ ವಹಿಸಿ ನಿವಾರಿಸಲು ಬಂದ ಸಾಧಿಕ್ ಕೊಂಬಕ್ಕೆ ಒರಗಿ ನಿಂತ ಹರಡಿದ ಕೂದಲಿನ ಸಫೀರಾಳ ನೋಡಿ "ಎಂಥಾ ಚಲುವೆ! ಅವಳ ಕಣ್ಣು, ಮೂಗೋ, ಬಾಯೋ.. ನಕ್ಕರೆ ಫಕ್ಕನೆ ಹೊಳೆಯುವ ಆ ಬಿಳಿ ಬಿಳಿ ಹಲ್ಲುಗಳೋ ಮಾಟವಾದ ದೇಹ, ಅಲಕ್ಷ್ಯವಾಗಿ ಸೀರೆ ಸುತ್ತಿದ್ದರೂ ಎದ್ದು ಕಾಣುತ್ತಿದ್ದ ಅವಳ ದೇಹಸಿರಿ, ದಂತದ ಬಣ್ಣದ ಕೈಗಳಿಗೆ ಹಚ್ಚಿದ ಮೆಹಂದಿ.. ಅಬ್ಬಾ ಎಷ್ಟು ಚೆನ್ನಾಗಿದ್ದಾಳೆ.. ಓದಿದ್ದಾಳೆ ಕೂಡ,, ಅವಳ ಮೈ ಎಷ್ಟು ಕೋಮಲವಾಗಿರಬಹುದು ಎಂದು ಯೋಚಿಸಿದೊಡನೆಯೇ ಅವನ ಮೈ ಬಿಸಿಯೇರಿತು 'ಥೂ ನಿನ್ನ! ಅಷ್ಟೊಳ್ಳೆ ಹೆಂಡ್ತಿ ಇದ್ದಾಳೆ ಮನೇಲಿ, ಕಂಡೋರ ಹೆಂಗಸರನ್ನೆಲ್ಲ ಮನಸ್ಸಿನಲ್ಲೇ ಕಲ್ಪಿಸಿಕೊಳ್ತೀಯ.. ಎಂಥಾ ದೊಡ್ಡ ಮನುಷ್ಯನಪ್ಪ ನೀನು.. ಎಂದು ತನ್ನನ್ನು ತಾನೇ ಬೈದುಕೊಂಡ ಎಂದು ಕತೆಗಾರ್ತಿ

ಒಂದು ಪ್ರಸಂಗದ ಬಗ್ಗೆ ಮುಖ್ಯವಾಗಿ ಚರ್ಚೆಸಬೇಕಾಗುತ್ತದೆ. ಇದನ್ನು ಒಬ್ಬ ಲೇಖಕರು ಬರೆದಿದ್ದರೆ ಆ ಬರವಣಿಗೆಯನ್ನು ವಿಜೃಂಭಿಸಿಯೋ, ಕಲ್ಪನಾಲೋಕದಲ್ಲಿ ವಿಹರಿಸಿ ಬಿಡುಲಾಗಿತ್ತಿತ್ತು. ಆದರೆ ಇಲ್ಲಿ ಬಾನು ಮುಷ್ತಾಕ್ ಅವರು ಸಾದಿಕ್‌ನ ಪಾತ್ರದ ಮೂಲಕವೇ ಸಮಾಜಕ್ಕೆ ಚಾಟಿ ಏಟನ್ನು ನೀಡಿದ್ದಾರೆ. ಇನ್ನೊಬ್ಬರ ಹೆಂಡತಿಯನ್ನು ಮನಸ್ಸಿನಲ್ಲಿ ಕಲ್ಪಿಸಿಕೊಳ್ಳುವುದು ಅಪರಾಧ ಎನ್ನುವ ಅಪರಾಧ ಪ್ರಜ್ಞೆಯನ್ನು ಪುರುಷ ಪಾತ್ರದ ಮೂಲಕವೇ ಹೇಳುವುದು ಕತೆಗಾರರ ತಂತ್ರಗಾರಿಕೆಯೂ ಹೌದು, ಸಾಮಾಜಿಕ ಸಂದೇಶವು ಹೌದು.

ಸಫೀರಾ ಮತ್ತು ಅಸ್ಲಮ್ ಮಧ್ಯೆ ಜಗಳ ಉಂಟಾದಾಗ ಗೌನ್ ಹಾಕಿಕೊಂಡು ತೆಗೆಸಿಕೊಂಡ ಡಿಗ್ರಿ ಫೋಟೋಗಳು ಕೆಳಗೆ ಬಿದ್ದು ಚೆಲ್ಲಾಪಿಲ್ಲಿಯಾಗಿದ್ದವು ಎನ್ನುವಲ್ಲಿ ಹೆಣ್ಣಿನಲ್ಲಿ ಶಿಕ್ಷಣದಿಂದ ಉಂಟಾದ ತಿಳುವಳಿಕೆಯನ್ನು ಈ ಸಮಾಜ ಅವ್ಯಕ್ತವಾಗಿ ನಿರಾಕರಿಸುತ್ತಲೇ ಇರುತ್ತದೆ. ಈ ಕತೆಯಲ್ಲಿ ಬರುವ ಸಫೀರಾ ಕುಟುಂಬ ನಿರ್ವಹಣೆಯಲ್ಲಿ ಗಂಡನ ದುಡಿಮೆ ಸಾಕಾಗದ ಹಿನ್ನೆಲೆಯಲ್ಲಿ ಹೊರಗೆ ಹೋಗಿ ದುಡಿಯಲು ಪ್ರಾರಂಭಿಸುವುದನ್ನು ಹೆಣ್ಣಿನ ನೆಲೆಯಲ್ಲಿ ಯೋಚಿಸದ ಅಸ್ಲಮ್, ಪುರುಷ ದೃಷ್ಟಿಕೋನದಲ್ಲಿ ಆಲೋಚಿಸುತ್ತಾನೆ. ಕೆಲಸ ನಿರ್ವಹಿಸುವ ಆಫೀಸ್‌ನಲ್ಲಿ ಗಂಡು ಹೆಣ್ಣು ಎನ್ನುವ ಬೇಧವಿಲ್ಲದೇ ಕಾರ್ಯನಿರ್ವಹಿಸುವ ಸ್ಥಳದಲ್ಲಿ ಅಸ್ಲಮ್‌ನ ಸಂಶಯದ ಮನಸ್ಥಿತಿ ತನ್ನ ಹೆಂಡತಿಯೊಂದಿಗೆ ಜಗಳವಾಡುವಂತೆ ಮಾಡುತ್ತದೆ. ಗಂಡನ ಸಂಶಯ ಗುಣವನ್ನು ಸಫೀರಾ ವಿರೋಧಿಸುತ್ತಾಳೆ. ಹೆಣ್ಣಿನ ಆಶೆ ಆಕಾಂಕ್ಷೆಗಳ ಈಡೇರಿಸುವ ಕೇಂದ್ರ ಗಂಡನೇ ಆಗಿರಬೇಕು ಎನ್ನುವ ಸಾಮಾಜಿಕ ಧೋರಣೆಯನ್ನು ಸಫೀರಾ ಪ್ರತಿರೋಧಿಸುತ್ತಾಳೆ. ಸಫೀರಾ ತನ್ನ ಸ್ವಾಯತ್ತತೆಯ ಪ್ರಶ್ನೆಯನ್ನು ಮುಂದಿಡುವ ಕ್ರಮವನ್ನು ಕತೆಗಾರ್ತಿ ಸೂಕ್ಷ್ಮವಾಗಿ ಕತೆಯಲ್ಲಿ ಹೆಣೆದಿದ್ದಾರೆ. ಸಫೀರಾಳ ಮುಖಾಂತರವಾಗಿ ಅದರಲ್ಲೂ ಮುಸ್ಲಿಮ್ ಸಮುದಾಯದ ಹೆಣ್ಣುಮಕ್ಕಳು ಹೊರಗೆ ಹೋಗಿ ದುಡಿಯುವುದೆಂದರೆ ಗಂಡಿನ ಅಸಮರ್ಥತೆ ಎಂಬ ಭಾವನೆಗಳ ಪಿತೃಸತ್ತೆಯ ಸಮಾಜದ ಭಾಗವಾಗಿ ಅಸ್ಲಮ್ ಕಾಣುತ್ತಾನೆ. ಸ್ವತಂತ್ರವಾಗಿ ಹೊರಗೆ ಹೋಗಿ ದುಡಿಯುವ ವಿಚಾರವಾಗಿ ಸಫೀರಾ ಮತ್ತು ಅಸ್ಲಮ್ ದಾಂಪತ್ಯದಲ್ಲಿ ಬಿರುಕು ಮೂಡುತ್ತದೆ. ಗಂಡ ಹೆಂಡತಿಯ ಜಗಳದಿಂದ ಇಬ್ಬರು ಬೇರೆ ಬೇರೆ ಆಗುತ್ತಾರೆ. ಸಫೀರಾಳನ್ನು ಆಕೆ ತವರು ಮನೆಯವರು ಕರೆದುಕೊಂಡು ಹೋಗುತ್ತಾರೆ. ಇತ್ತ ಒಬ್ಬಂಟಿಯಾದ ಅಸ್ಲಮ್‌ಗೆ ಸಫೀರಾಳ ನೆನಪು ಮತ್ತೆ ಮತ್ತೆ ಕಾಡುತ್ತದೆ. ಇತ್ತ ತವರುಮನೆಯಲ್ಲಿರುವು ಸಫೀರಾಳು ನೆಮ್ಮದಿಯಿಂದ ಇರಲು ಸಾಧ್ಯವಾಗುವುದಿಲ್ಲ.

ಮುಸ್ಲಿಮ್ ಸಮುದಾಯದ ಆಚಾರ ವಿಚಾರಗಳ ಅಂಶಗಳು ಪ್ರಸ್ತಾಪಿತವಾಗುತ್ತವೆ. ತಲಾಖ್ ಮತ್ತು ಮರುವಿವಾಹದ ವಿಷಯಗಳು ಕಥಾ ಹಂದರದಲ್ಲಿ ಸೂಳಿದು ಹೋಗುತ್ತವೆ. ಸಾದಿಕ್ ಮನೆಗೆ ಅಸ್ಲಮ್ ಬಗ್ಗೆ ವಿಚಾರಿಸಲು ಬಂದ ಸಫೀರಾಗೆ ಹೊಟ್ಟೆ ನೋವಿನಿಂದ ಬಳಲುತ್ತಿದ್ದ ಶಾಹೀನ್ ಎದುರಾಗುತ್ತಾಳೆ. ಚಿಕಿತ್ಸೆಗೆಂದು ಆಸ್ಪತ್ರೆಗೆ ಹೊರಟು ನಿಂತ ಶಾಹೀನ್‌ಳಿಗೆ ನಾನು ಬರುವುದಾಗಿ ಸಫೀರಾ ಹೇಳಿದಾಗ ಬೇಡವೆನ್ನಲಾಗದೇ ಆಸ್ಪತ್ರೆಗೆ ಬರಲು ಅನುಮತಿಸುತ್ತಾನೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಇನ್ನೋನು ಮನೆಗೆ ಹೊರಡಲು ಆಟೊ ತರಲು ಸಾದಿಕ್ ಹೋದಾಗ ಸಿನಿಮಿಯಾ ದೃಶ್ಯಗಳಂತೆ ಸಫೀರಾಳನ್ನು ಕಾರ್ ನಲ್ಲಿ ಅಸ್ಲಮ್ ಅಪಹರಿಸಿಕೊಂಡು ಹೋಗುತ್ತಾನೆ. ಕತೆಗಾರ್ತಿಗೆ ಕತೆಯಲ್ಲಿ ಕೂತುಹಲ ಹುಟ್ಟಿಸುವಂತ ತಂತ್ರಗಾರಿಕೆಯ ಅಂಶಗಳನ್ನು ತರುವ ಪ್ರಯತ್ನ ಮಾಡಿದ್ದಾರೆ. ಆದ್ದರಿಂದ ಕತೆ ತುಂಬಾ ಸರಳವಾಗಿ ಸಹೃದಯನಿಗೆ ಸಹಜವಾಗಿ ಓದಿಸಿಕೊಳ್ಳುತ್ತದೆ.

ದಾಂಪತ್ಯದಲ್ಲಿ ಬರುವ ಸಣ್ಣಪುಟ್ಟ ತಪ್ಪು ತಿಳುವಳಿಕೆಗಳನ್ನು ಅರ್ಥಮಾಡಿಕೊಳ್ಳುವ ಮೂಲಕ ಜೀವನವನ್ನು ನಡೆಸಬೇಕಾಗುತ್ತದೆ. ಯಾವುದೋ ಸಂದರ್ಭದಲ್ಲಿ ಯಾವುದೋ ವಿಷಯಕ್ಕೆ ವೈಮನಸ್ಸುಗಳು ಉಂಟಾದಾಗ ಅದಕ್ಕೆ ಬಹು ಸಮಯ ತೆಗೆದುಕೊಳ್ಳದೇ ಬೇಗ ಬಗೆಯರಿಸಿಕೊಂಡರೆ ಗಂಡ ಹೆಂಡತಿಯ ಜಗಳಕ್ಕೆ ಅರ್ಥ ಬರುತ್ತದೆ. ಇಲ್ಲದಿದ್ದರೆ ಬದುಕು ಅನರ್ಥವಾಗಿ ಅಸಮಾಧಾನದ ನೆಲೆಯಲ್ಲಿ ಒದ್ದಾಡಬೇಕಾಗುತ್ತದೆ. ದಾಂಪತ್ಯದ ಬದುಕು ಕೇವಲ ದೈಹಿಕ ಸಂಬಂಧವಲ್ಲ, ಒಬ್ಬರಿಗೊಬ್ಬರು ಪರಸ್ಪರ ಪ್ರೀತಿ, ವಿಶ್ವಾಸ, ಗೌರವವನ್ನು ಹೊಂದಬೇಕಾಗುತ್ತದೆ. ಒಬ್ಬರ ಭಾವನೆಗಳನ್ನು ಇನ್ನೊಬ್ಬರು ಗೌರವಿಸಿಕೊಂಡಾಗ ಮಾತ್ರ ಸಂತೋಷದ ಜೀವನವನ್ನು ನಡೆಸಲು ಸಾಧ್ಯವಾಗುತ್ತದೆ ಎನ್ನುವುದನ್ನು ಕಥಾ ಹಂದರಲ್ಲಿ ಹರಡಿಕೊಳ್ಳುವ ಸಫೀರಾ ಮತ್ತು ಅಸ್ಲಮ್ ದಂಪತಿಗಳ ಬದುಕಿನ ಕತೆ, ಹೊಂದಾಣಿಕೆಯ ಬದುಕನ್ನು ರೂಪಿಸಿಕೊಳ್ಳುವಂತೆ ಪ್ರೇರಣಾದಾಯಕ ಆಶಯವನ್ನು ಹೊಂದಿದೆ. ದಾಂಪತ್ಯಕ್ಕೆ ಗೌರವ ಮತ್ತು ಪ್ರೀತಿ ತುಂಬಾ ಮುಖ್ಯವಾದದ್ದು. ನಂಬಿಕೆಯೆ ದಾಂಪತ್ಯದ ಅಡಿಪಾಯ. ಪರಸ್ಪರ ಹಂಚಿಕೊಳ್ಳುವ ಭಾವನೆಗಳು ಇನ್ನೊಬ್ಬರ ಭಾವನೆಗಳನ್ನು ಗಟ್ಟಿಗೊಳಿಸಬೇಕು ಎನ್ನುವ ಅಂಶಗಳನ್ನು ಕತೆಯ ಆಶಯದ ಹಿನ್ನೆಲೆಯಲ್ಲಿ ಅಭಿವ್ಯಕ್ತಿಗೊಂಡಿದೆ.

ಮುಸ್ಲಿಮ್ ಸಮುದಾಯದಲ್ಲಿ ಹೆಣ್ಣಿನ ಸ್ಥಾನಮಾನ ಏನು? ಆಕೆಯ ತಲ್ಲಣಗಳೇನು ಎನ್ನುವುದನ್ನು ಕತೆಯ ಸ್ತ್ರೀಪಾತ್ರಗಳ ಮೂಲಕ ಸಶಕ್ತವಾಗಿ ಮೂಡಿ ಬಂದಿದೆ. ಪ್ರೀತಿ ಪ್ರೇಮ ಇವೆಲ್ಲವೂ ವಾಸ್ತವ ಬದುಕಿನಲ್ಲಿ ಸಾಧ್ಯವಿಲ್ಲ ಎನ್ನುವ ಸ್ಥಾಪಿತ ಮೌಲ್ಯಾಧಾರಿತ ಸಮಾಜದಲ್ಲಿ ನಿಜ ಪ್ರೀತಿಗೆ ಗೆಲುವು ಇದೆ ಎನ್ನುವುದು ಈ ಕತೆ ಮೂಲದ್ರವ್ಯವಾಗಿದೆ. ಈ ಕತೆಯಲ್ಲಿ ಬರುವ ಸ್ತ್ರೀ ಪಾತ್ರಗಳು ಸಂಕಟ, ನೋವು, ತಳಮಳ, ತಲ್ಲಣಗಳನ್ನೊಳಗೊಳ್ಳುತ್ತಲೇ ಲೋಕದ ಬೆಳಕಿಗಾಗಿ ಪರಿತಪಿಸುವ, ಜೀವನಪ್ರೀತಿಯನ್ನು ಮತ್ತೆ ಮತ್ತೆ ಹಂಬಲಿಸುವ ಸ್ತ್ರೀ ಪಾತ್ರಗಳು ಕಾಡುವ ಪಾತ್ರಗಳಾಗಿ ಸಹೃದಯರಲ್ಲಿ ಮನೆಮಾಡುತ್ತವೆ.

ಆಕರ ಗ್ರಂಥಗಳು

1. ಹಸೀನಾ ಮತ್ತು ಇತರ ಕಥೆಗಳು, ಲೇ: ಬಾನು ಮುಷ್ತಾಕ್, ಅಭಿರುಚಿ ಪ್ರಕಾಶನ, ಮೈಸೂರು
2. ಕಥೆ ಹುಟ್ಟುವ ಪರಿ. ಸಂ: ಅಮರೇಶ ನುಗಡೋಣಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ